Demand No. 28 – Parliamentary Affairs and Legislation

Sir, on the recommendation of the Governor, I beg to move :That a sum not exceeding Rs.12457.66 lakhs on Revenue Account (inclusive of the sum granted on account') be granted to the Government to defray the charges which will come in course of payments during the financial year ending 31st March 2013 in respect OF "PARLIAMENTARY AFFAIRS AND LEGISLATION"

(ಆ) 2012–13ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಅಂಗೀಕಾರ.

ಅಧ್ಯಕ್ಷರು : – ಈಗ 2012–13ನೇ ಸಾಲಿನ ಪೂರಕ ಅಂದಾಜುಗಳ ಮೊದಲನೆಯ ಕಂತಿನ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ಇದನ್ನೂ ಮಂಡನೆ ಮಾಡಿದ್ದೇನೆ. ಇದರಲ್ಲಿ ಕೆಲವೊಂದು ಯೋಜನೆಗಳು, ಸುವರ್ಣ ಗ್ರಾಮ ಯೋಜನೆ ಇರಬಹುದು, ಮತ್ತೆ ಕೆಲವು ತುರ್ತಾದಂಥ ಕಾಮಗಾರಿಗಳ ಸಲುವಾಗಿ ಈ ಪೂರಕ ಅಂದಾಜುಗಳನ್ನು ನಾನು ಮಂಡನೆ ಮಾಡಿದ್ದೇನೆ. ದಯವಿಟ್ಟು ಅದಕ್ಕೂ ಸಹ ಸದನವು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದಿ : 31.03.2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ ಒಂದರಿಂದ ಹದಿನೈದು, ಹದಿನೇಳರಿಂದ ಇಪ್ಪತ್ತನಾಲ್ಕು ಹಾಗೂ ಇಪ್ಪತ್ತಾರು, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯೂ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : – 2012–13 ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ಬೇಡಿಕೆಗಳ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ,,,

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನಕ್ಕೆ ಆಗಮಿಸಿದರು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೆ, ಸಪ್ಲಿಮೆಂಟರಿ ಬಜೆಟ್‌ನ್ನು ಇನ್ನೂ ಇಂಟ್ರಡ್ಯೂಸೇ ಮಾಡಿಲ್ಲ. ಆಗಲೇ ಅದನ್ನು ಪಾಸ್ ಮಾಡಲು ಹೊರಟಿದ್ದೀರಲ್ಲ. ನೀವು ಅದನ್ನು ಮಂಡಿಸಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : – ಅದನ್ನು ಮಂಡನೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಹಾಗಿದ್ದರೆ ಆ ಬಗ್ಗೆ explain ಮಾಡಿ.

ಅಧ್ಯಕ್ಷರು : – ಆ ಬಗ್ಗೆ ಆಗಲೇ ಅವರು explain ಮಾಡಿದರು. ಆಗ ನೀವು ಇರಲಿಲ್ಲವಷ್ಟೆ.

ಶ್ರೀ ಸಿದ್ದರಾಮಯ್ಯ : – explain ಮಾಡಿದರೆ?

ಅಧ್ಯಕ್ಷರು : – ಹೌದು, ಮಾಡಿದರು.

ಶ್ರೀ ಸಿದ್ದರಾಮಯ್ಯ : – ಅವರು ಮಂಡಿಸಿ explain ಮಾಡಿದಾಗ ನಾವು ಇರಲಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ : – ಸುವರ್ಣ ಗ್ರಾಮ ಯೋಜನೆ ಬಗ್ಗೆ ಹಾಗೂ ಇನ್ನಿತರ ತುರ್ತು ಯೋಜನೆಗಳ ಬಗ್ಗೆ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : – In the absence of the opposition ಮಂಡಿಸಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ : – ಮಾನ್ಯ ಅಧ್ಯಕ್ಷರೆ, ಈಗಾಗಲೇ process set in motion ಆಗಿದೆ. ಈಗ ನಿಲ್ಲಿಸುವುದಕ್ಕೆ ಬರುವುದಿಲ್ಲ. It has already been set in motion.

ಅಧ್ಯಕ್ಷರು : – explain ಮಾಡಿ, motion move ಆಗಿಹೋಗಿದೆ.

ಶ್ರೀ ಬಸವರಾಜ ಬೊಮ್ಮಾಯಿ : – It has already been set in motion, ಈಗ ನಿಲ್ಲಿಸುವುದಕ್ಕಾಗುವುದಿಲ್ಲ. We can not stop in the middle.

ಅಧ್ಯಕ್ಷರು : – ಅವರು ಈಗಾಗಲೇ motion move ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : – ಈಗಾಗಲೇ explain ಮಾಡಿ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : – ನಾನು ಪೂರಕ ಅಂದಾಜುಗಳ ಮೇಲೆ ಮಾತನಾಡಬೇಕು. ಮಾತನಾಡಬೇಕೋ, ಬೇಡವೋ ಸ್ವಾಮಿ?

ಅಧ್ಯಕ್ಷರು : – ಈಗಾಗಲೇ explain ಮಾಡಿ motion move ಮಾಡಿಯಾಗಿದೆ.

ಶ್ರೀ ಸಿದ್ದರಾಮಯ್ಯ:– move ಮಾಡಿದರೇನಂತೆ, ನಾವು ಮಾತನಾಡಬೇಕು.

ಅಧ್ಯಕ್ಷರು : – ಈಗಾಗಲೇ explain ಮಾಡಿ ಪ್ರಸ್ತಾವ ಏನಿದೆ ಅದನ್ನು ಹೇಳಾಗಿದೆ.

ಶ್ರೀ ಸಿದ್ದರಾಮಯ್ಯ : – ಪರವಾಗಿಲ್ಲ ಈ ಹಂತದಲ್ಲಿಯೂ ಮಾತನಾಡಬಹುದು.

ಅಧ್ಯಕ್ಷರು : – ಅದು ಹೇಗಾಗುತ್ತದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಎಲ್ಲಿ explain ಮಾಡಿದರು?

ಅಧ್ಯಕ್ಷರು : – ಅವರು explain ಮಾಡಿದಾಗ ತಾವು ಇರಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : – ಮಾನ್ಯ ಅಧ್ಯಕ್ಷರೆ, motion move ಮಾಡಿಯಾಗಿದೆ. ಈಗ ಮತ್ತೆ ಹಿಂದಕ್ಕೆ ವಾಪಸ್ ಹೋಗುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : – 2012–13ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಬೇಡಿಕೆಗಳ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವು ಹೀಗಿದೆ;

"ದಿನಾಂಕ 31–03–2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1 ರಿಂದ 15, ಹದಿನೇಳರಿಂದ ಇಪ್ಪತ್ತನಾಲ್ಕು, ಹಾಗೂ ಇಪ್ಪತ್ತಾರು, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ

ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು 2012–13ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಪೂರಕ ಅಂದಾಜುಗಳ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

1. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಕೃಷಿ ಮತ್ತು ತೋಟಗಾರಿಕೆ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ .12 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

2. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಪಶುಸಂಗೋಪನೆ ಮತ್ತು ಮೀನುಗಾರಿಕೆ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 7200.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1500.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

3. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಆರ್ಥಿಕ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ

ರಾಜಸ್ವ ಲೆಕ್ಕದಲ್ಲಿ 2221.48 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 220.68 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

4. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10510.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

5. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಒಳಾಡಳಿತ ಮತ್ತು ಸಾರಿಗೆ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1052.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 380.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಮೂಲಭೂತ ಸೌಕರ್ಯ ಅಭಿವೃದ್ಧಿ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 60.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

7. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10759.64 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 45000.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

8. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ

ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 680.02 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ .01 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

9. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಸಹಕಾರ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 11297.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 400.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

10. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಸಮಾಜ ಕಲ್ಯಾಣ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 6499.92 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

11. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 25890.79 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

12. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 400.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1359.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. 9. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಆಹಾರ ಮತ್ತು ನಾಗರೀಕ ಸರಬರಾಜು " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10.52 ಲಕ್ಷ

ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

14. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಕಂದಾಯ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 80918.83 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

15. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಮಾಹಿತಿ ತಂತ್ರಜ್ಞಾನ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1050.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

16. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಶಿಕ್ಷಣ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12315.11 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 2020.50 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

17. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ವಾಣಿಜ್ಯ ಮತ್ತು ಕೈಗಾರಿಕೆ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4193.64 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 5052.34 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

18. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ನಗರಾಭಿವೃದ್ಧಿ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5599.27 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

19. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಲೋಕೋಪಯೋಗಿ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ

ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 6000.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 82855.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

20. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಜಲ ಸಂಪನ್ಮೂಲ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30.00 ಲಕ್ಷ ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 16974.07 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

21. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಆರೋಗ್ಯ ಮತ್ತು ಕುಟುಂಬ ಕಲ್ಯಾಣ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂಧ್ಹಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 780.04 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

22. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಕಾರ್ಮಿಕ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 369.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

23. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಇಂಧನ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 25.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

24. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ " ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ " ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 4000.00 ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

1. That a further sum not exceeding Rs. 12 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Agriculture and Horticulture. "

2. That a further sum not exceeding Rs. 7200.00 Lakh on Revenue Account & Rs. 1500.00 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Animal Husbandry and Fisheries. "

3. That a further sum not exceeding Rs. 2221.48 Lakh on Revenue Account & Rs. 220.68 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Finance. "

4. That a further sum not exceeding Rs. 10510.00 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Department of Personnel and Administrative Reforms. "

5. That a further sum not exceeding Rs. 1052.00 Lakh on Revenue Account & Rs. 380.00 Lakh on Capital

Account be granted to the Government to defray the charges which will come in course of payment during the financial year ending 31st March 2013 in respect of " Home and Transport. "

6. That a further sum not exceeding Rs. 60.00 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Infrastructure Development. "

7. That a further sum not exceeding Rs. 10759.64 Lakh on Revenue Account & Rs. 45000.00 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Rural Development and Panchayath Raj. "

8. That a further sum not exceeding Rs. 680.02 Lakh on Revenue Account & Rs. .01 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Forest, Ecology and Environment. "

9. That a further sum not exceeding Rs. 11297.00 Lakh on Revenue Account & Rs. 400.00 Lakh on Capital Account be granted to the Government to defray the charges which will come in course of payment during

the financial year ending 31st March 2013 in respect of " Co-operation. "

10. That a further sum not exceeding Rs. 6499.92 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of "Social Welfare".

11. That a further sum not exceeding Rs. 25890.79 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Women and Child Development. "

12. That a further sum not exceeding Rs. 400.00 Lakh on Revenue Account & Rs. 1359.00 Lakh on Capital Account be granted to the Government to defray the charges which come in course of payment during the financial year ending 31st March 2013 in respect of " Information, Tourism and Youth Services. "

13. That a further sum not exceeding Rs. 10.52 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Food and Civil Supplies.. "

14. That a further sum not exceeding Rs. 80918.83 Lakh on Revenue Account be granted to the Government to defray the charges which will come in course of

payment during the financial year ending 31st March 2013 in respect of " Revenue."

15. That a further sum not exceeding Rs. 1050.00 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Information Technology. "

16. That a further sum not exceeding Rs. 12315.11 Lakh on Revenue & Rs. 20200.00 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Education. "

17. That a further sum not exceeding Rs. 4193.64 Lakh on Revenue & Rs. 5052.34 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Commerce and Industries. "

18. That a further sum not exceeding Rs. 5599.27 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Urban Development. "

19. That a further sum not exceeding Rs. 6000.00 Lakh on Revenue & Rs. 82855.00 Lakh on Capital Account be

granted to the Government to defray the charges which come in course of payment during the financial year ending 31st March 2013 in respect of " Public Works. "

20. That a further sum not exceeding Rs. 30.00 Lakh on Revenue & Rs. 16974.07 Lakh on Capital Account be granted to the Government to defray the charges which will come in course of payment during the financial year ending 31st March 2013 in respect of " Water Resources. "

21. That a further sum not exceeding Rs. 780.04 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Health and Family Welfare. "

22. That a further sum not exceeding Rs. 369.00 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Labour. "

23. That a further sum not exceeding Rs. 25.00 Lakh on Revenue Account be granted to the Government to defray the charges which will come in course of payment during the financial year ending 31st March 2013 in respect of " Energy. "

24. That a further sum not exceeding Rs. 4000.00 Lakh on Capital Account be granted to the Government to

defray the charges which will come in course of payment during the financial year ending 31st March 2013 in respect of " Planning, Statistics, Science and Technology. "

Bangalore : **SECRETARY**
Dated : July, 2012 KARNATAKA LEGISLATURE

ಶ್ರೀ ಸಿದ್ದರಾಮಯ್ಯ : – What is this? ಏಕೆ ಹೀಗೆ ಮಾಡುತ್ತಿದ್ದೀರಿ? ನಾವೇನು ಪಾಸ್ ಮಾಡಿಕೊಡುವುದಿಲ್ಲವೆಂದು ಹೇಳಿದ್ದೇವೆಯೇ?

ಶ್ರೀ ಡಿ.ಕೆ. ಶಿವಕುಮಾರ್ : – ಪಾಸ್ ಮಾಡಿಕೊಡುತ್ತೇವೆಂದು ಹೇಳಿದ್ದವಲ್ಲ? We are cooperating.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ರೆಕಾರ್ಡ್ ತರಿಸಿ, ಅದೇನು explain ಮಾಡಿದ್ದಾರೋ ನೋಡೋಣ.

(ಗೊಂದಲ)

ಅಧ್ಯಕ್ಷರು : – ಈಗಾಗಲೇ ಪಾಸ್ ಆಯಿತು.

ಶ್ರೀ ಸಿದ್ದರಾಮಯ್ಯ : – ಅವರು explain ಮಾಡಿದ್ದರೆ, ಅದು ರೆಕಾರ್ಡ್ ಆಗಿರಬೇಕಲ್ಲವೇ?

ಅಧ್ಯಕ್ಷರು : – ಅವರು explain ಮಾಡಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:– It has already been taken up. ಅವರು ರೆಕಾರ್ಡ್ ಮಾಡದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ? It has already been taken up. ಮಧ್ಯದಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು : – Finance Bill ಅನ್ನು consider ಮಾಡುವಾಗ ಮಾಡಿ.

ಶ್ರೀ ಸಿದ್ದರಾಮಯ್ಯ : – ಅವರು ಏನು explain ಮಾಡಿದ್ದಾರೆ ಎಂಬುದನ್ನು ತೋರಿಸಿ. ಪೂರಕ ಅಂದಾಜುಗಳ ಬಗ್ಗೆ ಅವರು explain ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : – ಅವರು ಹೇಳಿದ್ದಾರೆ. ನೀವು ಬೇಕಾದರೆ ತೆಗೆದು ನೋಡಿ.

ಶ್ರೀ ಅಮರೇಗೌಡ ಬಯ್ಯಾಪುರ್ : – ರೆಕಾರ್ಡ್‌ನಲ್ಲಿ ಬರೆದುಕೊಂಡಿರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : – ಅವರು ಬರೆದುಕೊಳ್ಳಲಿಲ್ಲವೆಂದರೆ ಅದು ಅವರ mistake. ಅಧ್ಯಕ್ಷರು ಅನೌನ್ಸ್ ಮಾಡಿದ್ದನ್ನು ನಾವು ಕೇಳಿದ್ದೇವೆ. ಅವರು ಅನೌನ್ಸ್ ಮಾಡಿದ್ದಾರೆ ಇವರು explain ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಿಮಗೆ ನಮ್ಮ co-operation ಬೇಕು ಎನ್ನುವುದಾದರೆ, this is not the way.

(ಗೊಂದಲ)

ಶ್ರೀ ಸಿದ್ದರಾಮಯ್ಯ : – They can't bulldoze like this.

ಶ್ರೀ ಅಮರೇಗೌಡ ಬಯ್ಯಾಪುರ್ : – ರೆಕಾರ್ಡ್ ಆಗಿಲ್ಲ.

ಅಧ್ಯಕ್ಷರು : – ರೆಕಾರ್ಡ್‌ನಲ್ಲಿ ಇದೆ ಎಂದು ಹೇಳುತ್ತಿದ್ದೇನಲ್ಲ? ನೀವು ಇರಲಿಲ್ಲ. ಅವರು ಸುವರ್ಣಗ್ರಾಮ ಮತ್ತು ಬೇರೆ ಬೇರೆಯವುಗಳು ಇದೆಯೆಂದು ಹೇಳಿದರು. ನೀವು ಎದ್ದು ಹೊರಟು ಹೋಗಿದ್ದೀರಿ. ನೀವು ಎದ್ದು ಹೋಗಿ ಈಗ ಬಂದು, ಈ ರೀತಿ ಮಾತನಾಡುತ್ತೀದ್ದೀರಿ. He has already moved the motion.

ಶ್ರೀ ಸಿದ್ದರಾಮಯ್ಯ : – ಸದನದಲ್ಲಿ ಸಭಾತ್ಯಾಗ ಮಾಡುವುದು ಮತ್ತೆ ಸದನದ ಒಳಗೆ ಬರುವುದು, ಇವೆಲ್ಲವೂ ಸ್ವಾಭಾವಿಕವಾಗಿ ನಡೆಯುವ ಪ್ರಕ್ರಿಯೆ.

ಅಧ್ಯಕ್ಷರು : – ನಾನು ಅದನ್ನು ತಡೆದಿಲ್ಲ. ಸ್ವಾಭಾವಿಕ ಸರಿ. ನಾನು ಅದನ್ನು ತಡೆದಿಲ್ಲ.

ಶ್ರೀ ಸಿದ್ದರಾಮಯ್ಯ : – Finance Bill ಗೆ ಸಂಬಂಧಪಟ್ಟದ್ದು ಎಂದು I can understand. Estimate ದ್ದು ಇರುತ್ತದೆ. ಅದನ್ನು 31ನೇ ತಾರೀಖು

ಮಾಡಬಹುದು, 1ನೇ ತಾರೀಖು ಮಾಡಬಹುದು, 2ನೇ ತಾರೀಖು ಮಾಡಬಹುದು. Where is the necessity, where is the urgency for this? ಹೀಗೇಕೆ ಮಾಡುತ್ತೀದ್ದೀರಿ?

ಡಾ: ಹೆಚ್.ಸಿ. ಮಹದೇವಪ್ಪ:– ಏಕೆ ಹೀಗೆ ಮಾಡುತ್ತಿದ್ದೀರಿ? It is not correct.

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುವರ್ಣ ಗ್ರಾಮ ಬಗ್ಗೆ explain ಮಾಡಿ ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, vote on account time ಮುಗಿದಿಲ್ಲ. Could we not speak on this? ನಾವು walk out ಮಾಡಬಾರದು ಎಂದು ಇದೆಯೇ?

ಶ್ರೀ ಬಸವರಾಜ ಬೊಮ್ಮಾಯಿ : – Set in motion ಆದಾಗ ಮಾತನಾಡುವುದಕ್ಕಾಗುವುದಿಲ್ಲ. ಅದಕ್ಕಿಂತ ಮೊದಲು ಮಾತನಾಡುವ ಹಕ್ಕು ನಿಮಗೆ ಇದೆ. ಆ ಹಕ್ಕನ್ನು ನೀವು ಉಪಯೋಗ ಮಾಡಿಕೊಂಡಿಲ್ಲ ಅಷ್ಟೇ.

ಶ್ರೀ ಸಿದ್ದರಾಮಯ್ಯ : – There is technical aspect.

(ಗೊಂದಲ)

ಶ್ರೀ ಎಸ್.ಎ. ರಾಮದಾಸ್ : How can you go back?

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು explain ಮಾಡಿದ್ದೇನೆ. ಅದು motion move ಆಗಿದೆ.

ಅಧ್ಯಕ್ಷರು : – ಈಗ ವಿಧೇಯಕವನ್ನು ಮಂಡಿಸುವುದು.

ಶ್ರೀ ಸಿದ್ದರಾಮಯ್ಯ : – ನೋಡಿ, ನಾವು ಈ ತರಹದ dictatorial attitude ಅನ್ನು ಪ್ರತಿಭಟನೆ ಮಾಡುತ್ತೇವೆ. We are going to protest.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನಿಜ. 3,600 ಕೋಟಿ ಚರ್ಚೆಯಾಗದೆ ಹಾಗೆಯೇ ಮಾಡಿಕೊಂಡು ಹೋದರೆ ಹೇಗೆ..

(ಗೊಂದಲ)

2. ಶಾಸನ ರಚನೆ.

(ಅ) ವಿಧೇಯಕಗಳ ಮಂಡನೆ

1) 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ – 2) ವಿಧೇಯಕ